ನಾನು ಕಂಡ ವಿವೇಕಾನಂದ



ಡಾ.ಆರ್. ಬಾಲಸುಬ್ರಹ್ಮಣ್ಯಂ

# ಮಹಾನ್ ಸಾಧಕರ ಮಹತ್ವದ ನುಡಿಗಳು

ಒಬ್ಬ ವ್ಯಕ್ತಿಯ ನಿಜವಾದ ಹಿರಿಮೆಯು ಆತ ಕಾಲವಾದ ಹಲವು ವರ್ಷಗಳ ನಂತರ ಅನುಭವಕ್ಕೆ ಬರುತ್ತದೆ. ಗಾಂಧೀಜಿ, ಸ್ವಾಮಿ ವಿವೇಕಾನಂದ, ರಮಣ ಮಹರ್ಷಿ, ಮಾರ್ಟಿನ್ ಲೂಥರ್ ಹೀಗೆ ಯಾರೇ ಆಗಿದ್ದರೂ ಭವಿಷ್ಯದ ಹಲವಾರು ಪೀಳಿಗೆಗಳ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ್ದಾರೆ. ಇಂತಹವರು ಪೂಜನೀಯರೂ, ಆದರ್ಶಪ್ರಾಯರೂ ಆಗಿರುತ್ತಾರೆ.

ಸ್ವಾಮಿ ವಿವೇಕಾನಂದರು ಎಂತಹ ವಿಶಿಷ್ಟ ಹಾಗೂ ಪರಿಪೂರ್ಣ ವ್ಯಕ್ತಿತ್ವ ಹೊಂದಿದ್ದರೆಂದರೆ, ಅವರು ಮಾಡಿದ ಕಾರ್ಯಗಳು ಇಂದಿಗೂ ಪ್ರಸ್ತುತವಾಗಿವೆ. ಅವರ ಯೋಚನೆಗಳು ಹಾಗೂ ಆದರ್ಶಗಳು ಬರೀ ಯುವಕರಿಗೆ ಮಾತ್ರವಲ್ಲದೆ, ಎಲ್ಲ ವಯೋಮಾನದವರನ್ನೂ ಸೆಳೆಯುವಂತಿವೆ. ಅಂತಹ ಮಹಾನ್ ಚೇತನವನ್ನು ಇತರ ಉದಾತ್ತ ವ್ಯಕ್ತಿಗಳು ದೈವತ್ವಕ್ಕೇರಿಸಿದಾಗ ಅವರ ವ್ಯಕ್ತಿತ್ವದ ಉಜ್ವಲತೆ ಇನ್ನಷ್ಟು ಹೆಚ್ಚಾಗುತ್ತದೆ.

ಸ್ವಾಮಿ ವಿವೇಕಾನಂದರ ಬಗ್ಗೆ ಎಂತೆಂತಹ ದಿಗ್ಗಜರು ಏನು ಹೇಳಿದ್ದಾರೆಂಬುದನ್ನು ನೋಡಿದಾಗ, ಅವರು ಬೀರಿದ ಪ್ರಭಾವ ಎಷ್ಟಿರಬಹುದೆಂಬ ಬಗ್ಗೆ ಇನ್ನಷ್ಟು ಅಚ್ಚರಿಯಾಗುತ್ತದೆ. ಉದಾಹರಣೆಯಾಗಿ ಕೆಲವರ ಹೇಳಿಕೆಗಳನ್ನು ಇಲ್ಲಿ ನೋಡೋಣ.

‘ಸ್ವಾಮಿ ವಿವೇಕಾನಂದರು ಹಿಂದುತ್ವ ಹಾಗೂ ಭಾರತವನ್ನು ಸಂರಕ್ಷಿಸಿದವರು. ಅವರಿಲ್ಲದೇ ಹೋಗಿದ್ದರೆ ನಾವು ನಮ್ಮ ಧರ್ಮವನ್ನು ಕಳೆದುಕೊಳ್ಳುತ್ತಿದ್ದೆವು. ಅವರಿಲ್ಲದ ಹೊರತು ನಮಗೆ ಸ್ವಾತಂತ್ರ್ಯ ಪಡೆಯಲು ಕೂಡ ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ನಾವು ಪ್ರತಿಯೊಂದು ವಿಷಯದಲ್ಲೂ ಸ್ವಾಮಿ ವಿವೇಕಾನಂದರಿಗೆ ಋಣಿಯಾಗಿದ್ದೇವೆ. ನಾವು ಅವರಿಂದ ಪಡೆದಿರುವ ನಿಧಿಯನ್ನು ಸುರಕ್ಷಿತವಾಗಿ ಕಾಪಾಡುವ ದಿಸೆಯಲ್ಲಿ ಅವರ ನಂಬಿಕೆ, ಧೈರ್ಯ ಮತ್ತು ವಿವೇಕಗಳು ನಮಗೆ ಸದಾ ಸ್ಫೂರ್ತಿ ತುಂಬಲಿ’ ಎಂದಿದ್ದಾರೆ ರಾಜಕೀಯ ಮುತ್ಸದ್ದಿ ಹಾಗೂ ಭಾರತದ ಮೊತ್ತಮೊದಲ ಗವರ್ನರ್ ಜನರಲ್ ಸಿ.ರಾಜಗೋಪಾಲಾಚಾರಿ.

‘ಭಾರತದ ಬಡತನ ಮತ್ತು ಬ್ರಿಟಿಷ್ ವಸಾಹತುಶಾಹಿ ಆಡಳಿತದ ದಬ್ಬಾಳಿಕೆಯಡಿ ರಾಷ್ಟ್ರ ನಲುಗುತ್ತಿರುವುದು ವಿವೇಕಾನಂದರನ್ನು ತೀವ್ರವಾಗಿ ಕಾಡಿತು. ರಾಷ್ಟ್ರಗಳನ್ನು ಈ ಅನಿಷ್ಟಗಳಿಂದ ವಿಮುಕ್ತಿಗೊಳಿಸಲು ಅವರು ಕ್ರಾಂತಿಯ ಸಂಕಲ್ಪ ಮಾಡಿದರು. ಈ ಕ್ರಾಂತಿಯ ಧ್ಯೇಯವು ಗಾಂಧೀಜಿಯವರ ಮೇಲೆ ಅಪಾರವಾದ ಪ್ರಭಾವ ಬೀರಿತು. ಅಷ್ಟೇ ಅಲ್ಲ, ಇವತ್ತಿಗೂ ಭಾರತದ ರಾಜಕೀಯ ಚಿಂತನೆಯ ಮೇಲೆ ಇದು ಬೀರಿರುವ ಪರಿಣಾಮ ಅಗಾಧವಾದದ್ದು. ಈ ಅರ್ಥದಲ್ಲಿ, ವಿವೇಕಾನಂದರು ಭಾರತೀಯ ಚರಿತ್ರೆಯಲ್ಲಿ ಮೇರು ಪುರುಷರು. ಭಾರತದಲ್ಲಿ ಈವರೆಗೆ ಉದಯಿಸಿದ ಅತ್ಯುತ್ಕೃಷ್ಟ ಐತಿಹಾಸಿಕ ವ್ಯಕ್ತಿ ಅವರು. ಆದರೆ ವಿವೇಕಾನಂದರ ಕ್ರಾಂತಿ, ಅವರ ರಾಷ್ಟ್ರೀಯತೆಯ ಭಿನ್ನತೆ ಗಮನಾರ್ಹ. ಇತರ ಮಹಾನ್ ನಾಯಕರು, ಆದರ್ಶ ವ್ಯಕ್ತಿಗಳು ಪ್ರತಿಪಾದಿಸುತ್ತಿದ್ದ ಕ್ರಾಂತಿ– ರಾಷ್ಟ್ರೀಯತೆಗೂ ವಿವೇಕಾನಂದರ ಪ್ರತಿಪಾದನೆಗಳಿಗೂ ವ್ಯತ್ಯಾಸವಿದೆ. ವಿವೇಕಾನಂದರ ಪರಿಕಲ್ಪನೆಗಳು ಇತರ ಮಹಾನ್ ನಾಯಕರ ಪರಿಕಲ್ಪನೆಗಳಿಗಿಂತ ಭಾರಿ ಉದಾತ್ತವಾದವುಗಳು. ವಿವೇಕಾನಂದರ ಚಿಂತನೆಗಳ ಹರವಿನ ವ್ಯಾಪ್ತಿಯನ್ನು ಇಡಿಯಾಗಿ ಗಮನಿಸಿದಾಗ ಯಾರಿಗೇ ಆದರೂ ನಿಬ್ಬೆರಗಾಗುತ್ತದೆ’ ಎಂದಿದ್ದಾರೆ ಆಂಗ್ಲೊ ಅಮೆರಿಕನ್ ಕಾದಂಬರಿಕಾರ ಹಾಗೂ ನಾಟಕಕಾರ ಕ್ರಿಸ್ಟೊಫರ್ ಇಷರ್‌ವುಡ್.

ವಿವೇಕಾನಂದರು ಪಾಶ್ಚಿಮಾತ್ಯರನ್ನು ಏಷ್ಯಾದ ಸಂಪತ್ತಿನ ಲೂಟಿಕೋರರು ಎಂಬ ದೃಷ್ಟಿಯಿಂದಷ್ಟೇ ನೋಡಲಿಲ್ಲ. ಅವರನ್ನು ಅಪಾರ ಪ್ರಮಾಣದಲ್ಲಿ ಕೊಡುಗೆ ನೀಡುವ ಸಾಮರ್ಥ್ಯವುಳ್ಳ ಭವಿಷ್ಯದ ಪಾಲುದಾರರು ಎಂಬ ಮನೋಭಾವದಲ್ಲಿ ನೋಡಿದರು. ಇದೇ ವೇಳೆ, ಯಾವುದೇ ಅಳುಕಿಲ್ಲದೆ, ಪಾಶ್ಚಿಮಾತ್ಯರಿಗೆ ಮುಖಾಮುಖಿಯಾಗಿ ನಿಂತು, ‘ನಿಮಗೆ ಸಂಪೂರ್ಣವಾಗಿ ಕೊಡಬಹುದಾಗಿದ್ದನ್ನು ನಾವೂ ಹೊಂದಿದ್ದೇವೆ. ಅದೆಂದರೆ, ಇವತ್ತಿಗೂ ರಾಮಕೃಷ್ಣರಂತಹ ಸಾಧಕರನ್ನು ಸೃಷ್ಟಿಸಬಲ್ಲ ಇಲ್ಲಿನ ಉದಾತ್ತ ಆಧ್ಯಾತ್ಮಿಕ ಪರಂಪರೆ ಎಂದವರು ಅವರು....’ ಎಂದು ಕ್ರಿಸ್ಟೊಫರ್ ಮುಂದುವರಿಯುತ್ತಾರೆ.

ಅಮೆರಿಕದ ಹೆಸರಾಂತ ಇತಿಹಾಸ ತಜ್ಞ ಹಾಗೂ ಪ್ರಖ್ಯಾತ ಕೃತಿ ‘ದಿ ಸ್ಟೋರಿ ಆಫ್ ಫಿಲಾಸಫಿ’ಯ ಲೇಖಕ ವಿಲ್ ಡ್ಯುರಾಂಟ್ ವಿವೇಕಾನಂದರನ್ನು ಕುರಿತು ಹೀಗೆನ್ನುತ್ತಾರೆ. ‘ವೇದಕಾಲದಿಂದ ಹಿಡಿದು ಈವರೆಗೆ ಯಾರೂ ಹೇಳಿರದ ರೀತಿಯಲ್ಲಿ ತಮ್ಮ ರಾಷ್ಟ್ರದ ಜನತೆಗೆ ಅತ್ಯಂತ ಕಸುವು ತುಂಬಿದ ತತ್ವಗಳನ್ನು ಬೋಧಿಸಿದವರು ವಿವೇಕಾನಂದರು... ದೇವರು ಎಂದರೆ ‘ಎಲ್ಲ ಚೇತನಗಳ ಸಮಷ್ಟಿ’ ಎಂಬ ಪುನರ್ ವ್ಯಾಖ್ಯಾನ ನೀಡಿದವರು ಅವರು. ಧರ್ಮವನ್ನು ಶುಷ್ಕ ವ್ರತ ಹಾಗೂ ಧ್ಯಾನದ ಬದಲಿಗೆ ಮಾನವ ಕುಲದೆಡೆಗಿನ ಅಪ್ಪಟ ಶ್ರದ್ಧೆಯೊಂದಿಗೆ ಅನುಸರಿಸಲು ಕಿವಿಮಾತು ನುಡಿದವರು’.

ಭಾರತದ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಸ್ವಾಮೀಜಿ ಕುರಿತು ಆಡಿದ ಮಾತುಗಳು ಹೀಗಿವೆ. ‘ಸ್ವಾಮಿ ವಿವೇಕಾನಂದರ ಬದುಕು, ಬೋಧನೆ ಮತ್ತು ರಾಮಕೃಷ್ಣ ಮಠದ ಕಾರ್ಯಗಳನ್ನು ಅರಿಯುವ ಅದೃಷ್ಟ ನನ್ನದಾಗಿತ್ತು. ವಿವೇಕಾನಂದರ ಬೋಧನೆಗಳು ನೆಹರು ಕುಟುಂಬದ ಪ್ರತಿಯೊಬ್ಬರ ನಿತ್ಯ ಜೀವನ ಹಾಗೂ ರಾಜಕೀಯ ಚಟುವಟಿಕೆಗಳನ್ನು ಪ್ರೇರೇಪಿಸಿವೆ ಎಂಬುದನ್ನು ನಾನು ಹೇಳಲೇಬೇಕಾಗಿದೆ. ಅವರ ಬೋಧನೆ, ಬರಹ ಮತ್ತು ಭಾಷಣಗಳು ಉತ್ತೇಜನಕಾರಿ. ಅವರು ನಮ್ಮಲ್ಲಿ ಧೈರ್ಯ, ಶಕ್ತಿ, ನಂಬಿಕೆಗಳನ್ನು ತುಂಬಿ ಹೇಗೆ ಸ್ವಯಂಪೂರ್ಣವಾಗಿರಬೇಕು ಎಂಬುದನ್ನು ಮನಗಾಣಿಸಿದ್ದಾರೆ. ಇವು ಎಂದೆಂದಿಗೂ ಜೀವನಕ್ಕೆ ಅತ್ಯಗತ್ಯವಾದ ಮೂಲಭೂತ ಧಾರೆಗಳು.... ನವ ಭಾರತವನ್ನು ಹೇಗೆ ಮರುನಿರ್ಮಾಣ ಮಾಡಬೇಕೆಂಬುದಕ್ಕೆ ನಮಗೆ ರೂಪುರೇಷೆ ಹಾಕಿಕೊಟ್ಟವರು ವಿವೇಕಾನಂದರು. ಅವರು ವಿಶ್ವ ಸಹೋದರತ್ವ ಎಂದರೇನೆಂಬುದನ್ನು ಮನವರಿಕೆ ಮಾಡಿಕೊಟ್ಟರು. ‘ನಿರ್ಭಯ’ವನ್ನು ತಮ್ಮ ಜೀವನದ ಮಂತ್ರವಾಗಿಸಿಕೊಂಡಿದ್ದ ಅವರು ತಮ್ಮ ಎಲ್ಲ ಭಾಷಣಗಳಲ್ಲೂ ಅದರ ಮಹತ್ವ ಸಾರಿದರು.

ಹೀಗೆ ತತ್ವಜ್ಞಾನಿಗಳು, ಶಿಕ್ಷಣ ತಜ್ಞರು, ಇತಿಹಾಸ ತಜ್ಞರು, ರಾಜಕಾರಣಿಗಳು, ಲೇಖಕರು ಸೇರಿದಂತೆ ಜೀವನದ ಎಲ್ಲ ರಂಗಗಳ ಸಾಧಕರೂ ಸ್ವಾಮಿ ವಿವೇಕಾನಂದರಿಂದ ಪ್ರೇರಿತರಾಗಿದ್ದಾರೆ. ವಿವೇಕಾನಂದರ ಬಗ್ಗೆ ಕೇವಲ ಭಾರತದ ಮಹಾನ್ ವ್ಯಕ್ತಿಗಳಷ್ಟೇ ಉದ್ಗರಿಸಿಲ್ಲ; ಜಗತ್ತಿನೆಲ್ಲೆಡೆಯ ವಿವಿಧ ರಂಗಗಳ ಸಾಧಕರು ಮೆಚ್ಚುಗೆಯ ನುಡಿಗಳನ್ನು ಆಡಿದ್ದಾರೆ. ಇದು ಅವರ ವಿಶ್ವ ಸಂದೇಶವನ್ನು ಹಾಗೂ ಇಡೀ ಜಗತ್ತೇ ಅವರನ್ನು ಸ್ವೀಕರಿಸಿತ್ತು ಎಂಬುದನ್ನು ತೋರಿಸುತ್ತದೆ.

◆